**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ:65:ಹೆಚ್‌ಪಿಸಿ:2021:ದಿನಾಂಕ:04.12.2021.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ:425:ಗ್ರೂಪ್-ಡಿ/2017-18/ನೇವಿ-1,ದಿನಾಂಕ:04.03.2018 ಮತ್ತು 22.11.2018.

******

**ಪ್ರಸ್ತಾವನೆ:**

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/2/ಟಿಎಫ್‌ಪಿ/2020.ದಿನಾಂಕ:01.04.2020ರಲ್ಲಿ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ(55)(2)(ಡಿ)ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಈ ನಿಯಮದಡಿ ಯಾವುದೇ ಅಂಶಕಾಲಿಕ, ಅಕುಶಲ/ನಿಪುಣ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂದಿಸಿದೆ. ಕಾಲೇಜುಗಳಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹಂತದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ.

2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-034 ರಡಿಯಲ್ಲಿ ನಾಲ್ಕನೇ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಿರುವ ರೂ.248.50 ಲಕ್ಷಗಳಲ್ಲಿ 06 ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 09 "ಡಿ"ಗ್ರೂಪ್ ಸಿಬ್ಬಂದಿಗಳಿಗೆ ವೇತನ ಪಾವತಿಸಲು ರೂ.11,43,216/-(ಹನ್ನೊಂದು ಲಕ್ಷದ ನಲವತ್ತ ಮೂರು ಸಾವಿರದ ಎರಡು ನೂರ ಹದಿನಾರು ರೂಪಾಯಿಗಳು) ಮಾತ್ರ ಅನುದಾನವನ್ನು ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲು ಈ ಆದೇಶ:

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ಹೊ.ಗು.ಅ/10/2021-22, ಬೆಂಗಳೂರು, ದಿನಾಂಕ:02.03.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ:2202-03-103-2-01-034ರಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ "ಡಿ"ಗ್ರೂಪ್ ಸಿಬ್ಬಂದಿಗಳ ವೇತನ ಪಾವತಿಗಾಗಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ 06 ಕಾಲೇಜುಗಳಿಗೆ ರೂ.11,43,216/-(ಹನ್ನೊಂದು ಲಕ್ಷದ ನಲವತ್ತ ಮೂರು ಸಾವಿರದ ಎರಡು ನೂರ ಹದಿನಾರು ರೂಪಾಯಿಗಳು) ಅನುದಾನವನ್ನು ಕಾಲೇಜಿನ ಪ್ರಾಂಶುಪಾಲರುಗಳಿಗೆ ಈ ಕೆಳಕಂಡ ಷರತ್ತುಗಳನ್ವಯ ಬಿಡುಗಡೆ ಮಾಡಲಾಗಿದೆ.

(ಇ-ಕಡತದಲ್ಲಿ ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿರುತ್ತದೆ.

R. Nugeshal
**ಕಾಲೇಜು ಶಿಕ್ಷಣ ನಿರ್ದೇಶಕರು**

**ಷರತ್ತುಗಳು:**

01 ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನವನ್ನು 10 ದಿನದೊಳಗೆ ಬಳಕೆ ಮಾಡತಕ್ಕದ್ದು ಇಲ್ಲವಾದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಅನುದಾನವನ್ನು ಹಿಂಪಡೆಯಲಾಗುವುದು.

02 ಡಿ"ಗ್ರೂಪ್ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸುವಾಗ ಕನಿಷ್ಠ ವೇತನ ಕಾಯ್ದೆ, ಇಎಸ್‌ಐ & ಪಿ.ಎಫ್‌ಕಾಯ್ದೆಯನ್ನು ಪಾಲಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ.

03 ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.

04 ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.

05 ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

**ಇವರಿಗೆ:**

ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

**ಪ್ರತಿಯನ್ನು :**

1. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು-ಅಂತರ್ಜಾಲದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.

1467609185 | 2/3/22

*D:\Manjula2021-22\out source 45 college grant order 2021-22.docx*

Mail sent to Jt. Sec

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ಹೊ.ಗು.ಅ/10/2021-22, ಬೆಂಗಳೂರು, ದಿನಾಂಕ:02.03.2022.**

**ಆದೇಶಕ್ಕೆ ಅನುಬಂಧ**

ಹೊರಗುತ್ತಿಗೆ "ಡಿ" ಗ್ರೂಪ್ ಸಿಬ್ಬಂದಿಗಳಿಗೆ ಬಾಕಿ ಇರುವ ವೇತನ ಪಾವತಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು.

| ಕ್ರ.ಸಂ | ಕಾಲೇಜಿನ ಹೆಸರು | ಸಿಬ್ಬಂದಿ ಸಂಖ್ಯೆ | ಬಿಡುಗಡೆ ಮಾಡಲಾಗುತ್ತಿರುವ ಅನುದಾನದ ಮೊತ್ತ | ಷರಾ |
|---|---|---|---|---|
| 01 | ಮಸಗೃಹವಿಕಾ ಹೊಳೆನರಸೀಪುರ | 03 | 186180 | ಸೆಪ್ಟಂಬರ್-21 ರಿಂದ ಡಿಸೆಂಬರ್-21ರವರೆಗಿನ ವೇತನ |
| 02 | ಸಪ್ರದಕಾ ಸುಣ್ಣಕಲ್ಲಬಿದರಿ | 02 | 271350 | ಏಪ್ರೀಲ್-21 ರಿಂದ ಡಿಸೆಂಬರ್-21ರವರೆಗಿನ ವೇತನ |
| 03 | ಡಾ ಪಿ ದಯಾನಂದ ಪೈ ಸಪ್ರದಕಾ, ಮಂಗಳೂರು | 01 | 184338 | ಫೆಬ್ರವರಿ-21 ರಿಂದ ಡಿಸೆಂಬರ್-21ರವರೆಗಿನ ವೇತನ |
| 04 | ಸಪ್ರದಕಾ ಮೂಡಿಗೆರೆ | 01 | 232185 | ಅಕ್ಟೋಬರ್-2020 ರಿಂದ ಡಿಸೆಂಬರ್-21ರವರೆಗಿನ ವೇತನ |
| 05 | ಸಪ್ರದಕಾ ಅಳವಂಡಿ | 01 | 137268 | ಏಪ್ರೀಲ್-2021 ರಿಂದ ಡಿಸೆಂಬರ್-2021ರವರೆಗಿನ ವೇತನ |
| 06 | ಸಪ್ರದಕಾ ಕನಕಗಿರಿ | 01 | 131895 | ಏಪ್ರೀಲ್-2021 ರಿಂದ ಡಿಸೆಂಬರ್-2021ರವರೆಗಿನ ವೇತನ |
| | ಒಟ್ಟು | 09 | 1143216 | |

(ಹನ್ನೊಂದು ಲಕ್ಷದ ನಲವತ್ತಮೂರು ಸಾವಿರದ ಎರಡು ನೂರ ಹದಿನೂರು ಮಾತ್ರ)

R. Nagesha

ಕಾಲೇಜು ಶಿಕ್ಷಣ ನಿರ್ದೇಶಕರು

*D:\Manjula2021-22\out source 45 college grant order 2021-22.docx*